ಒ.ಎಸ್.- 34/2020
ಪಿ.ಡಬ್ಲ್ಯು- 01

ದಿನಾಂಕ 09-03-2026 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ಕೃಷಿ ಭೂಮಿಯನ್ನು ಖರೀದಿಸಬೇಕಾದರೆ ಕೃಷಿ ಭೂಮಿ ಹೊಂದಿರಬೇಕಾಗಿದ್ದರಿಂದ 1 ನೇ ಪ್ರತಿವಾದಿ ಅವರ ಹೆಸರಿನಲ್ಲಿದ್ದ ಐಟಮ್ ನಂಃ 4 ರ ಸ್ವತ್ತಿನಲ್ಲಿ 1/3 ಅಂಶದ ಹಕ್ಕನ್ನು ನನಗೆ ನಿಪಿ-89 ರ ಪ್ರಕಾರ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕೃಷಿ ಭೂಮಿಯನ್ನು ತೆಗೆದುಕೊಳ್ಳುವ ಕಾರಣಕ್ಕೆ ಅಲ್ಲ, ಆದರೆ ಆದಾಯ ತೆರಿಗೆ ಇಲಖೆಯಿಂದ ಸಮನ್ಸ್ ಆಗಿತ್ತು, ವಿಚಾರಣೆಗೆ ಇತ್ತು, ಆದ್ದರಿಂದ Chartered Accountant ಹೇಳಿರಬಹುದು ಭೂಮಿಯನ್ನು ಉಳಿಸಿಕೊಳ್ಳಿ, ಆದಾಯ ತೆರಿಗೆಗೆ ಅನುಕೂಲವಾಗುತ್ತದೆ ಎಂದು, ಆದ್ದರಿಂದ ಅವರು ಆ ರೀತಿ ಮಾಡಿರುತ್ತಾರೆ. ನಿಪಿ-9 ರಂತೆ ದಿಃ 30-06-2007 ರಂದು ನಾವುಗಳು ವಿಭಾಗಪತ್ರವನ್ನು ಐಟಮ್ ನಂಃ 4 ರ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿಸಿರುತ್ತೇವೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯೇ ಮಾಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ 2008 ರಲ್ಲಿ ಐಟಮ್ ನಂಃ 4 ರ ಸ್ವತ್ತನ್ನು MT Educare Private Limited ಗೆ ಬಾಡಿಗೆಗೆ ಕೊಡಲಾಗಿತ್ತು ಎಂದರೆ ಸರಿ. ಈ ಬಗ್ಗೆ ಸಾಕ್ಷಿಗೆ Rent Agreement ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಈಗ ನನಗೆ ಅದರ ಬಗ್ಗೆ ನೆನಪಿಲ್ಲ, ಆದರೆ ಬಾಡಿಗೆ ಕರಾರು ಆಗಿತ್ತು ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಸಹಿಯನ್ನು ನೋಡಿ ಎಂದು 1 ನೇ ಪ್ರತಿವಾದಿ ಪರ ವಕೀಲರು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗೊತ್ತಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

ಅದೇ ರೀತಿ 2 ನೇ ಪ್ರತಿವಾದಿ ಅವರ ಭಾಗಕ್ಕೆ ಬಂದ ಸ್ವತ್ತನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಕೂಡಾ 1 ನೇ ಪ್ರತಿವಾದಿಯೇ ಮಾಡಿಸಿರುತ್ತಾರೆ, ನಾವು ಸಹಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಸದರಿ MT Educare Private Limited ನವರು ತಲಾ ರೂ. 4 ಲಕ್ಷದಂತೆ ನನಗೆ ಮತ್ತು ನನ್ನ ಮತ್ತೊಬ್ಬ ಸಹೋದರ ನಂದಗೋಪಾಲರವರ ಖಾತೆಗೆ Advance ಮೊಬಲಗಾಗಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿ ತಿಂಗಳು ತಲಾ ರೂ. 40 ಸಾವಿರದಂತೆ ನನಗೆ ಮತ್ತು ನನ್ನ ಮತ್ತೊಬ್ಬ ಸಹೋದರನ ಖಾತೆಗೆ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಬಾಡಿಗೆಯನ್ನು ಹಾಕುತ್ತಿದ್ದರು, ಆದರೆ ಎಷ್ಟು ಎಂದು ತಿಳಿದಿಲ್ಲ ಎಂದು ತಿಳಿಸಿ, ಎಲ್ಲವನ್ನೂ 1 ನೇ ಪ್ರತಿವಾದಿಯೇ ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಐಟಮ್ ನಂಃ 4 ರ ಆಸ್ತಿಗೆ ಸಂಬಂಧಪಟ್ಟಂತೆ ತಿಂಗಳ Maintenance ಎಷ್ಟು ಕೊಡುತ್ತಿದ್ದೆವು ಎಂದು ನನಗೆ ನೆನಪಿಲ್ಲ. ಬಾಡಿಗೆಗೆ ಪಡೆದುಕೊಂಡ ನಂತರ MT Educare Private Limited ನವರು ಸದರಿ Maintenance Charge ನ್ನು 1 ನೇ ಪ್ರತಿವಾದಿಯ ಖಾತೆಯಾದ Axis Bank ಖಾತೆಗೆ ಜಮಾ ಮಾಡುತ್ತಿದ್ದರು ಎಂದರೆ ನನಗೆ

ಗೊತ್ತಿಲ್ಲ. 2011 ನೇ ಇಸವಿಯಲ್ಲಿ MT Educare Private Limited ನವರು Charitable Trust ಗೆ ನಾನು ಮತ್ತು ನನ್ನ ಸಹೋದರ ನಂದಗೋಪಾಲ ಬಾಡಿಗೆ ಕರಾರು ಮಾಡಿಕೊಟ್ಟಿದ್ದೆವು ಎಂದರೆ ಸಾಕ್ಷಿಯು ನಾವು ಸಹಿ ಮಾತ್ರ ಮಾಡುತ್ತಿದ್ದೆವು ಎಂದು ತಿಳಿಸಿರುತ್ತಾರೆ. ಸದರಿ ಬಾಡಿಗೆ ಕರಾರು ನೋಂದಣಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ಮಾಡಿಕೊಟ್ಟಿದ್ದರೆ ಸದರಿ ದಾಖಲೆ ನಮ್ಮ ಬಳಿ ಇರಬೇಕಾಗಿತ್ತು, ಸದರಿ ದಾಖಲೆ ಅವರ ಬಳಿ ಹೇಗೆ ಇರುತ್ತಿತ್ತು ಎಂದು ತಿಳಿಸಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.